# ಮಕ್ಕಳಿಗಾಗಿ ಬೈಬಲ್

## ಅರ್ಪಿಸುವ



# ಸಭೆಯ ಜನನ


ಬರಹಗಾರರು: Edward Hughes
ಚಿತ್ರಲೇಖಕರು: Janie Forest
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Ruth Klassen



60ರ 55ನೇ ಕಥೆ

**www.M1914.org**

***Bible for Children,*** *PO Box 3, Winnipeg, MB R3C 2G1 Canada*



**ಅನುಮತಿ:** ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.
ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.


ಕನ್ನಡ

Kannada



ಯೇಸು ಸತ್ತ ನಂತರ ಆತನ ಶಿಷ್ಯರು ಹೇದರಿ ಅಡಗಿಕೊಂಡರು. ಯೇಸು ಪುನರುತ್ಥಾನವಾದನಂತರ ಶಿಷ್ಯರಿಗೆ ಕಾಣಿಸಿಕೊಂಡರು. ಯೇಸು ಅವರನ್ನು ಬಿಟ್ಟು ತಾನು ಬಂದ ಸ್ಥಳಕ್ಕೆ ತಿರುಗಿ ಹೋಗಿ ತಂದೆಯೊಂದಿಗೆ ಇರುವೆನೆಂದು ತಿರ್ಮಾನಿಸಿದನು.

1



ಯೇಸುವು ಬಿಟ್ಟು ಹೋಗುವ ಮೊದಲು ತನ್ನ ಹಿಂಬಾಲಕರಿಗೆ ನಿಮ್ಮನ್ನು ಸಂತೈಸಲು ಮತ್ತು ನಿಮಗೆ ಸಹಾಯಕನನ್ನಾಗಿ ಆತ್ಮನನ್ನು ಕಳಿಸುತ್ತೆನೆಂದು ವಾಗ್ದಾನವನ್ನು ಮಾಡಿದ್ದನು.

2



**(ಯೋಹಾನ. ೧೫:೨೬)** ಯೇಸುವು ಅವರನ್ನು ಬಿಟ್ಟು ಹೋದ ಕೆಲವು ದಿನಗಳ ನಂತರ ಪವಿತ್ರಾತ್ಮನು ಬಂದನು.

3

**120** ಜನರು ಕಾಯೂವಾಗ ತಕ್ಷಣವೆ ಅವರಿರುವಂತ ಮನೆಯಲ್ಲಿ ಬಿರುಗಾಳಿ ಬೀಸುತ್ತದೋ ಎಂಬಂತೆ ಪಕ್ಕನೆ ಒಂದು ಶಬ್ದವುಂಟಾಗಿ ಆ ಮನೆಯನ್ನೇಲ್ಲಾ ತುಂಬಿಕೊಂಡಿತು.



4

ಅಲ್ಲಿರುವ ಎಲ್ಲಾ ಜನರ ಮೇಲೆ ಬೆಂಕಿಯು ಕವಲೊಡೆದಹಾಗೆ ತುಂಬಿಕೊಂಡು ಎಲ್ಲರು ಪವಿತ್ರಾತ್ಮಭರಿತರಾದರು. ಯೇಸು ವಾಗ್ದಾನ ಮಾಡಿದಂತೆ ಆಯಿತು.



5

ಅವರು ತಾವು ಕಲಿಯದ ಭಾಷೆಯನ್ನು ಮಾತಾಡಲಾರಂಬಿಸಿದರು, ಅದನ್ನು ಕೇಳಿದ ಅಲ್ಲಿ ಬಂದಂತ ಜನರು ಇವರು ನಮ್ಮ ನಮ್ಮ ಹಟ್ಟು ಭಾಷೆಯನ್ನು ಮಾತಡುತ್ತಾರೆಂದು ಅಂದುಕೊಂಡು ಅಲ್ಲಿರುವ ಜನರು ಆಶ್ಚರ್ಯಪಟ್ಟರು ಮತ್ತು 'ಇವರು ದ್ರಾಕ್ಷರಸವನ್ನು ಕುಡಿದಿದ್ದಾರೆಂದು' ಅವರನ್ನು ಪರಿಹಾಸ್ಯ ಮಾಡಿದರು.



6

ಆಗ ಪೇತ್ರನು ಎದ್ದು ನಿಂತು ಹೇಳಿದ್ದೆನೆಂದರೆ, ನೀವು ಬಾವಿಸಿದಂತೆ ಇವರು ಅಮೆಲೇರಿದವರಲ್ಲ, ಪ್ರವಾದಿಯಾದ ಯೋವಲನ ಗ್ರಂಥದಲ್ಲಿ ದೇವರು ವಾಗ್ದಾನ ಮಾಡಿದ ಹಾಗೆ ಪವಿತ್ರಾತ್ಮನು ಬಂದು ಎಲ್ಲರಿಗೂ ಸಹಾಯ ಮತ್ತು ಆಶೀರ್ವಾದ ಮಾಡುವವನೆಂದು ಹೇಳಲ್ಪಟ್ಟಿದೆ. ಎಂಬುದಾಗಿ ಅವರಿಗೆ ಜ್ಞಾಪಿಸಿದನು.



7

ಆಗ ಪೇತ್ರನು ಮತ್ತು ಹನ್ನೊಂದು ಮಂದಿ ಅಪೋಸ್ತಲರ ಸಹಿತವಾಗಿ ಎದ್ದು ನಿಂತು ಹೇಳಿದ್ದೆನೆಂದರೆ ನೀವು ನಿಮ್ಮ ನಿಮ್ಮ ಪಾಪಗಳಿಂದ ಮನ:ತಿರುಗಿ ಪಶ್ಚತಾಪಪಟ್ಟು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ಥಾನ ತಗೆದುಕೊಳ್ಳಿರಿ, ಆಗ ಪವಿತ್ರಾತ್ಮ ದಾನವನ್ನು ಹೊಂದಿಕೊಳ್ಳುವಿರಿ.




8

ಆತನ ಮಾತಿಗೆ ವಿಧೇಯರಾದವರು 3000 ಜನರು ಮತ್ತು ಹಾಗೆಯೇ ಹೆಚ್ಚು ಹೆಚ್ಚು ಜನರು ಆ ಸಭೆಗೆ ಸೇರುತ್ತ ಬಂದರು. ಪವಿತ್ರಾತ್ಮನು ಬಂದ ದಿನದಿಂದ ಸಭೆಯು ಪ್ರಾರಂಭವಾಯಿತು.




9

ಯೇಸುವನ್ನು ನಂಬಿದ ದೇವ ಜನರೆಲ್ಲರ ಮೇಲೆ ಪವಿತ್ರಾತ್ಮನ ಶಕ್ತಿಯು ಬಂತು. ಒಂದು ದಿನ ಪೇತ್ರನು ಮತ್ತು ಯೋಹಾನನು ಮೂರು ಘಂಟೆಯ ಸಮಯಕ್ಕೆ ನಡೆಯುವ ಪ್ರಾರ್ಥನೆಗೆ ಹೋಗುವಾಗ ದೇವಾಲಯದ ಬಾಗಿಲಲ್ಲಿ ಒಬ್ಬ ಕುಂಟ ಭಿಕ್ಷುಕಗಾರನಿದ್ದನು, ಅವನು ಪೇತ್ರ, ಯೋಹಾನರ ಹತ್ತಿರ ಭಿಕ್ಷವನ್ನು ಕೇಳಿದನು.



10



ಪೇತ್ರ, ಯೋಹಾನರು ‘ನಮ್ಮಲ್ಲಿ ಬೆಳ್ಳಿ ಬಂಗಾರವಂತು ಇಲ್ಲಾ ನಮ್ಮಲ್ಲಿರುವಂತದನ್ನು ಕೊಡುತ್ತವೆಂದು ಹೇಳಿ ನಜರೇತಿನ ಯೇಸುವಿನ ನಾಮದಲ್ಲಿ ಎದ್ದು ನಡೆದಾಡು’ ಎಂದು ಹೇಳಿ ಆತನ ಕೈಯನ್ನು ಹಿಡಿದು ಮೇಲಕ್ಕತ್ತಿದರು, ಕೂಡಲೆ ಅವನ ಕೈ ಕಾಲುಗಳಿಗೆ ಬಲ ಬಂದು ಹಾರುತ್ತ ಕುಣಿಯೂತ್ತ ದೇವರನ್ನು ಸ್ತುತಿಸುತ್ತ ದೇವಾಯಳದೋಳಕ್ಕೆ ಹೋದನು.

11

ಅದನ್ನು ನೋಡಿದ ಜನರು ಆಶ್ಚರ್ಯ ಪಟ್ಟರು, ಆಗ ಪೇತ್ರನು ಇವನು ಗುಣವಾಗುವುದಕ್ಕೆ ಇದು ದೇವರ ಶಕಿಯೇ ಹೊರತು ನಮ್ಮ ಶಕ್ತಿಯಲ್ಲ ಎಂದು ಸಾರಿ ಹೇಳಿದನು.



12

ಮತ್ತು ಯೇಸುವನ್ನು ದೇವರು ಸಾವಿನಿಂದ ಎಬ್ಬಿಸಿದನು ಎಂದು ಹೇಳಿದಾಗ ಯಹೂದ್ಯ ನಾಯಕರು ಪೇತ್ರ ಯೋಹಾನರ ಮೇಲೆ ಸಿಟ್ಟುಗೊಂಡು ಸೆರೆಮನೆಯಲ್ಲಿ ಹಾಕಿದರು. ಅಂತಹ ಪರಿಸ್ಥಿತಿಯಲ್ಲಿಯೂ 5000 ಗಂಡಸರು ಯೇಸುವಿನ ಮೇಲೆ ನಂಬಿಕೆಯನ್ನಿಟ್ಟರು.



13

ಮಾರನೆಯ ದಿನ ಪೇತ್ರ, ಯೋಹಾನರು ದೇವಾಲಯದ ನಾಯಕರ ಮುಂದೆ ನಿಂತರು, ನಾಯಕರು ಅವರಿಗೆ ಕೇಳಿದ್ದೇನೆಂದರೆ ನೀವು ಯಾವ ಶಕ್ತಿಯಿಂದ ಮತ್ತು ಯಾವ ಅಧಿಕಾರದಿಂದ ಇದನ್ನು ಮಾಡುತ್ತಿರಿ? ಎಂದು ಕೇಳಿದಾಗ, ಆಗ ಪೇತ್ರನು ಧೈರ್ಯವಾಗಿ ‘ಶಿಲುಬೆಗೆ ಎರಿಸಲ್ಪಟ್ಟು ಸತ್ತು ಸಾವಿನಿಂದ ಎದ್ದಿರುವಂತ ನಜರೇತಿ ಯೇಸುವಿನ ನಾಮದಲ್ಲಿ’ ನಾವು ಇದನ್ನು ಮಾಡುವವರಾಗಿದ್ದೆವೆ ಎಂದು ಅವರಿಗೆ ಉತ್ತರಕೊಟ್ಟನು.



14



ಪೇತ್ರನು 'ಧೈರ್ಯವಾಗಿ ಆಕಾಶದ ಕೆಳಗೆ ಮತ್ತು ಮನುಷ್ಯರೊಳಗೆ ಕೊಡಲ್ಪಟ್ಟಿರುವ ಯಾವ ಹೆಸರಿನಿಂದಲೂ ರಕ್ಷಣೆಯಾಗಲಾರದು' ಎಂದು ಹೇಳಿದನು. ಇದನ್ನು ಕೇಳಿದ ಆ ನಾಯಕರು ಪೇತ್ರ, ಯೋಹಾನರನ್ನು ಹೊಡೆಸಿ ಇನ್ನೂ ಮುಂದೆ ಈ ಹೆಸರನ್ನು ಎತ್ತಿ ಮಾತನಾಡಬಾರದೆಂದು ಗದರಿಸಿ ಎಚ್ಚರಿಸಿದರು.

15



ಪವಿತ್ರಾತ್ಮನು ಬರುವ ಮೊದಲು ಪೇತ್ರನು ಯೇಸುವಿನ ನಿಮಿತ್ತವಾಗಿ ಭಯಪಡುತ್ತಿದ್ದ, ಆದರೆ ಪವಿತ್ರಾತ್ಮನು ಆತನ ಮೇಲೆ ಬಂದಾಗ, ಆತನನ್ನು ಯಾರು ಭಯಪಡಿಸುವುದಕ್ಕೆ ಯಾರಿಂದಲೂ ಆಗಲಿಲ್ಲ.

16



ಪೇತ್ರ, ಯೋಹಾನರು ಹೇಳಿದ್ದೇನೆಂದರೆ ದೇವರಿಗಿಂತ ಹೆಚ್ಚಾಗಿ ನಿಮ್ಮ ಮಾತನ್ನು ಕೇಳುವುದು ಸರಿಯೇ? ನೀವೇ ತೀರ್ಮಾನಿಸಿರಿ, ನಾವು ಮಾತ್ರ ಕಂಡು ಕೇಳಿದನ್ನು ಹೇಳದೆ ಇರಲಾರೆವು.

17





ಬಹಳ ಹಿಂಸೆಯ ನಂತರ ಪೇತ್ರ, ಯೋಹಾನರನ್ನು ಸರೆಮನೆಯಿಂದ ಬಿಡುಗಡೆಮಾಡಿದರು. ಅವರ ಜೊತೆ ಸರಮನೆಯಲ್ಲಿದ್ದಂತಹ ಎಲ್ಲರಿಗೂ ಸುವಾರ್ತೆಯನ್ನು ತಿಳಿಸಿದರು ಮತ್ತು ಅನೇಕ ರೋಗಿಗಳನ್ನು ಗುಣ ಪಡಿಸಿದರು. ಅಲ್ಲಿರುವಂತ ಅನೇಕರ ಮೇಲೆ ಪವಿತ್ರಾತ್ಮನು ಇಳಿದು ಬಂದನು. ಹೀಗೆ ಸಭೆಯು ಬೆಳೆಯುತ್ತ ಬಂತು.

18

ಸಭೆಯ ಜನನ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಅಪೋಸ್ತಲ ಕೃತ್ಯ **1–4**

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**

**ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.**

**ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.**

**ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16**

**ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.**